## ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ರವರ ನ್ಯಾಯಾಲಯ
## ತಿಪಟೂರು

### ಸಿ.ಸಿ ನಂ. 1413/2017

ಚಾಸಾಃ 1
ಫ್ರಾಸಾಃ 5

**ದಿನಾಂಕಃ 27-06-2023 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

| | | |
|---|---|---|
| ಸಾಕ್ಷಿಯ ಹೆಸರು | ಃ | ಕೃಷ್ಣರಾಜು ಜಿ |
| ತಂದೆಯ/ಗಂಡನ ಹೆಸರು | ಃ | ಜಿ.ಎಸ್ ಗಿಡ್ಡೇಗೌಡ |
| ವಯಸ್ಸು | ಃ | 46 ವರ್ಷ |
| ಉದ್ಯೋಗ | ಃ | ಇನ್ಸ್ ಪೆಕ್ಟರ್ |
| ವಾಸ ಸ್ಥಳ | ಃ | ಮೈಸೂರು |

**ಮುಖ್ಯ ವಿಚಾರಣೆ ಎಪಿಪಿಯವರಿಂದಃ**

ದಿಃ14-03-2017 ರಿಂದ ದಿಃ 10-07-2019 ರವರೆಗೆ ನಾನು ತಿಪಟೂರು ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಸಿಪಿಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ 12-05-2017 ರಂದು ಸಂಜೆ 6-30 ಗಂಟೆ ಸಮಯದಲ್ಲಿ ಸಿಬ್ಬಂಧಿಯರಾದ ರುದ್ರೇಶ್, ಶಾಂತಕುಮಾರ್ ಮತ್ತು ಮಧುಸೂಧನ್ ರವರೊಂದಿಗೆ ಇಲಾಖಾ ಜೀಪಿನ ಸಂಖ್ಯೆ ಕೆಎ-06-ಜಿ-421 ರಲ್ಲಿ ಗಸ್ತುನಲ್ಲಿದ್ದಾಗ ಕಿಬ್ಬನಹಳ್ಳಿ ಶೆಟ್ಟಿಹಳ್ಳಿ ಗ್ರಾಮದ ಶಿವಣ್ಣ ಎಂಬುವವರ ಅಂಗಡಿಯಲ್ಲಿ ಅಕ್ರಮವಾಗಿ ಮಧ್ಯ ಮಾರಾಟ ಮಾಡುತ್ತಿದ್ದಾರೆ ಎಂಬುದಾಗಿ ಬಂದ ಖಚಿತ ಮಾಹಿತಿ ಮೇರೆಗೆ ಪಂಚರುಗಳಾದ ಚಾಸಾ-2 ಮತ್ತು 3 ರವರನ್ನು ಬರಮಾಡಿಕೊಂಡು ಪಂಚರಾಗಿ ಸಹಕರಿಸುವಂತೆ ತಿಳುವಳಿಕೆ ನೀಡಿ ಶಿವಣ್ಣ ಎಂಬುವವರ ಅಂಗಡಿಗೆ ಹೋಗಿ ಪರಿಶೀಲಿಸಲಾಗಿ ಅಂಗಡಿಯಲ್ಲಿ ಶಿವಣ್ಣರವರ ಮಗ ಕುಮಾರಸ್ವಾಮಿ ಯವರು ಇದ್ದು ವ್ಯಪಾರ ಮಾಡುತ್ತಿದ್ದು ಅಂಗಡಿಯನ್ನು ಚೆಕ್ ಮಾಡಲಾಗಿ ಅಂಗಡಿಯಲ್ಲಿ 28 ಹೈ ವಾರ್ಡ್ ವಿಸ್ಕಿ ಪೌಚುಗಳು ಕಂಡು ಬಂದಿದ್ದು ಆರೋಪಿ ಕುಮಾರ ಸ್ವಾಮಿಯವರನ್ನು ಯಾವುದಾದರೂ ಪರವಾನಿಗೆ ಇದೆಯಾ ಎಂದು ವಿಚಾರಿಸಲಾಗಿ ಆರೋಪಿಯು ಹೆಚ್ಚಿನ ಲಾಭಕ್ಕಾಗಿ ಕಾನೂನು ಬಾಹಿರವಾಗಿ ಮಾರಾಟ ಮಾಡುವುದಾಗಿ ತಿಳಿಸಿದ ಮೇರೆಗೆ ಸ್ಥಳದಲ್ಲಿ ಸಿಕ್ಕ 28 ವಿಸ್ಕಿಯ ಪೌಚುಗಳು ಹಾಗೂ 1450 ರೂ. ಹಣವನ್ನು ಪಂಚರ ಸಮಕ್ಷಮ ಅಮಾನತ್ತು ಪಡಿಸಿಕೊಂಡು ಠಾಣೆಗೆ ಬಂದಿರುತ್ತೇನೆ. ನಂತರ

ಠಾಣೆಯಲ್ಲಿ ಆರೋಪಿ ಕುಮಾರ ಸ್ವಾಮಿಯವರ ವಿರುದ್ಧ ಪ್ರಕರಣ ದಾಖಲಿಸುವಂತೆ ಠಾಣಾಧಿಕಾರಿಗೆ ವರದಿಯನ್ನು ನೀಡಿರುತ್ತೇನೆ. ಸದರಿ ವರದಿಯಲ್ಲಿರುವ ಸಾಕ್ಷಿಯ ಸಹಿಯನ್ನು ನೋಡಿ ಗುರುತಿಸಿರುವುದರಿಂದ ನಿಪಿ-2 ಎಂದು ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಗಿದೆ. ಸ್ಥಳದಲ್ಲಿ 28 ಹೈವಾರ್ಡ ವಿಸ್ಕಿಯ ಪೌಚುಗಳನ್ನು ಅಮಾನತ್ತು ಪಡಿಸಿಕೊಂಡಿರುತ್ತೇನೆ ಮತ್ತು ಸ್ಥಳದಲ್ಲಿ ರಾಸಾಯನಿಕ ಪರೀಕ್ಷೆಗೆ ಕಳುಹಿಸಿಕೊಡಲು ಬಿಳಿ ಚೀಲದಲ್ಲಿ ಹಾಕಿ ಬಾಯನ್ನು ಕಟ್ಟಿ ಮುದ್ರಿಸಲಾಯಿತು. ನಿಪಿ-1 ನ್ನು ಚಾಸಾ2 ಮತ್ತು 3 ರವರ ಸಮಕ್ಷಮದಲ್ಲಿ ಬರೆಯಲಾಯಿತು ಸಾಕ್ಷಿಯು ಅವರ ಸಹಿಯನ್ನು ನೋಡಿ ಗುರುತಿಸಿರುವುದರಿಂದ ನಿಪಿ-1(ಇ) ಎಂದು ಗುರುತಿಸಲಾಯಿತು. ನ್ಯಾಯಾಲಯದ ಮುಂದೆ ಇರುವ 1450 ರೂ. ನ್ನು ಮತ್ತು ಎಂಓ-1 ನ್ನು ನೋಡಿ ಗುರುತಿಸಿರುತ್ತಾರೆ. ನನ್ನ ಜೊತೆ ನಿಪಿ-1 ಕ್ಕೆ ಚಾಸಾ-4 ರಿಂದ 6 ರವರು ಸಹಿ ಮಾಡಿರುತ್ತಾರೆ. ಆರೋಪಿಯವರು ಗೈರು ಹಾಜರು ಇದ್ದರೂ ಕೂಡ ಅರೋಪಿ ಪರ ವಕೀಲರಿಗೆ ಆರೋಪಿ ಗುರುತಿಸುವಿಕೆ ಬಗ್ಗೆ ತಕರಾರು ಇಲ್ಲ ಎಂದು ಕೋರಿರುತ್ತಾರೆ. ಸಾಕಿಯು ಆರೋಪಿಯನ್ನು ನೋಡಿದರೆ ಗುರುತಿಸಬಹುದು.

**ಪಾಟೀ ಸವಾಲು- ಆರೋಪಿ ಪರ ಶ್ರೀ ಬಿ ಎಂ ವಕೀಲರಿಂದಃ**

ದಿಃ 12-05-2017 ರಂದು ಯಾವ ಯಾವ ಕಡೆ ಗಸ್ತಿಗೆ ಹೋಗಿದೀವಿ ಎಂದು ನಮ್ಮ ಮೂಮೆಂಟ್ ರಿಜಿಸ್ಟರ್ ನಲ್ಲಿ ಬರೆದಿರುತ್ತೇವೆ. ಸದರಿ ದಾಖಲಾತಿಯನ್ನು ಹಾಜರು ಪಡಿಸಿರುವ ಬಗ್ಗೆ ತನಿಖಾಧಿಕಾರಿಯನ್ನು ಕೇಳಬೇಕು. ಚಾಸಾ-4 ರಿಂದ 6 ರವರು ಸಬೋರ್ಡಿನೇಟ್ ಆಫೀಸರ್ಸ ಎಂದರೆ ಸರಿ. ಚಾಸಾ-2 ಮತ್ತು 3 ರವರು ಅದೇ ಊರಿನವರು ಊರಿನವರು ಶಾಲೆ ಹತ್ತಿರ ಇರುವಾಗ ನಾವು ಅವರನ್ನು ಅಲ್ಲಿಂದ ಕರೆದುಕೊಂಡು ಹೋಗಿರುತ್ತೇವೆ ನಾವು ಅವರಿಗೆ ನೋಟೀಸನ್ನು ಕೊಟ್ಟಿರುವುದಿಲ್ಲ. ತಿಪಟೂರನ್ನು ನಾವು ಸಂಜೆ 5 ಗಂಟೆಗೆ ಬಿಟ್ಟಿರುತ್ತೇವೆ. ನಾನು ಯಾವ ಯಾವ ಕಡೆ ಎಷ್ಟು ಗಂಟೆಗೆ ಹೋಗಿದೀನಿ ಎಂದು ನನಗೆ ಈಗ ಹೇಳಲು ಸಾಧ್ಯ ಇಲ್ಲ. ನಿಪಿ-1 ರಲ್ಲಿ ಅಮಾನತ್ತು ಪಡಿಸಿಕೊಂಡಿರುವ ಮಧ್ಯದ ಟೆಟ್ರಾ ಪ್ಯಾಕೇಟ್ ಗಳ ತಯಾರಿಕ ದಿನಾಂಕ ಮತ್ತು ಬ್ಯಾಚ್ ನಂಬರನ್ನು ಬರೆದಿರುವುದಿಲ್ಲ ಎಂದರೆ ಸರಿ. ಅದೇ ರೀತಿ 1450 ರೂ. ನ ಡಿನಾಮಿನೇಷನ್ ಬಗ್ಗೆ ನಿಪಿ-1 ರಲ್ಲಿ ಬರೆದಿರುವುದಿಲ್ಲ. ದಿಃ 12-05-2017 ರಂದು ನಾನು ಚಾಸಾ-2 ರಿಂದ 6 ರವರು ಸ್ಥಳಕ್ಕೆ ಹೋಗಿದೀನಿ ಎಬಂದು ನಿಪಿ-1 ನ್ನು ಸ್ಥಳದಲ್ಲಿ ಬರೆದಿದೀನಿ ಎಂದು ಸುಳ್ಳು ಸಾಕ್ಷ್ಯ ನುಡಿತಾ ಇದ್ದೀನಿ ಎಂದರೆ ಸರಿಯಲ್ಲ. ಸ್ಥಳದಲ್ಲಿ ಅಂಗಡಿ ಯಾರ ಹೆಸರಿನಲ್ಲಿತ್ತು ಎಂದು ನಾನು ತಿಳಿದುಕೊಂಡೆ ಅದು ಆರೋಪಿಯ ತಂದೆ ಶಿವಣ್ಣ

ರವರ ಹೆಸರಿನಲ್ಲಿ ಇತ್ತು. ಶಿವಣ್ಣ ರವರ ಹೆಸರಿನಲ್ಲಿ ಅಂಗಡಿ ಇರಲಿಲ್ಲ ಎಂದರೆ ಸರಿಯಲ್ಲ. ಎಂ.ಓ-1 ಮತ್ತು 1450 ರೂ. ಆರೋಪಿಗೆ ಸಂಬಂಧಪಟಿಟರುವುದಿಲ್ಲ ಎಂದರೆ ಸರಿಯಲ್ಲ. ಸಾಮಾನ್ಯವಾಗಿ ನ್ಯಾಯಾಲಯದ ಮುಂದೆ ಇರುವ ಎಂಓ-1 ಎಲ್ಲಾ ಕಡೆ ಸಿಗುತ್ತದೆ ಎಂದರೆ ಸಾಕ್ಷಿ ವೈನ್ ಶಾಪ್ ಮುಂದೆ ಸಿಗುತ್ತದೆ ಎನ್ನುತ್ತಾರೆ. ಆರೋಪಿಗೆ ತೊಂದರೆ ಕೊಡಬೇಕೆನ್ನುವ ಉದ್ದೇಶದಿದಿಂದ ಸುಳ್ಳು ದೂರನ್ನು ನಾನು ಆರೋಪಿ ವಿರುದ್ಧ ಕೊಟ್ಟಿದೀನಿ ಎಂದರೆ ಸರಿಯಲ್ಲ.

**ಮರು ವಿಚಾರಣೆ - ಇರುವುದಿಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕರಿಸಿ ಓದಿ ಹೇಳಿ, ಕೇಳಿದಾಗ ಸರಿ ಇದೆ ಎಂದು ಒಪ್ಪಿರುತ್ತಾರೆ.)

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ
ತಿಪಟೂರು.